

ಚಿತ್ರ: ಎಸ್. ಜಗದೀಶ್

**ಬೆಳಗೆರೆ ಕೃಷ್ಣಶಾಸ್ತ್ರಿಗಳು 30 ವರ್ಷ ವಾಸವಿದ್ದ ಗುಡಿಸಲು**

ಮಾತನಾಡಿದರೋ ದೇವರ ಪದ ಬರುವುದಿಲ್ಲವೆಂದು ಆಕೆಗೆ ಹೇಳಲಾಗಲಿಲ್ಲ. ಇಕ್ಕಟ್ಟಿಗೆ ಸಿಲುಕಿದಳು. ಅಲ್ಲದೆ ನಾನು ಅವಳ ಹಾಡನ್ನು ಕೇಳಲು ಬಹಳ ದೂರದಿಂದ ಬಂದಿರುವುದಾಗಿ ಹೇಳಿದರು. ಸಿರಿಯಜ್ಜಿಗೆ ನಮ್ಮ ಮೇಲಿನ ನಂಬಿಕೆಗಿಂತ ಅವಳ ದೈವದ ಮೇಲಿನ ನಿಷ್ಠೆ, ಭಕ್ತಿ ಹೆಚ್ಚಾಗಿ, ದೇವರ ಹಾಡು ಹಾಡದಿದ್ದರೆ ನಿರ್ವಾಹವಿಲ್ಲವೆಂದು ಸಿರಿಯಣ್ಣನ ಹಾಡು ಆರಂಭಿಸಿದಳು. ಅವಳು ಆ ದಿನ ಒಬ್ಬಳೇ ಹಾಡಿದುದರಿಂದ ಆಕೆಯು ಹೊರಡಿಸುವ ಶಬ್ದಗಳು ನನ್ನ ಕಿವಿಗೆ ನಿಚ್ಚಳವಾಗಿ ಕೇಳಿಸುತ್ತಿದ್ದವು...

ಎದ್ದು ಬಾರೋ ಮುದ್ದು ಈರಣ್ಣ
ಅಲ್ಲಾವಿದ್ದು ಅಂಗಡಿಯಾಗ ಬೆಲ್ಲವಿದ್ದು ಸಿರಾದಾಗ
ಮಲ್ಲಿಗೆ ಅಯಿದಾವೋ ವನಾದಾಗ ||
ಈರಣ್ಣನ ಸೊಲ್ಲುಗಳಿದ್ದು ಮನದಾಗೆ
ಅಂಕವಿದ್ದು ಅಂಗಡಿಯಾಗೆ ಬಿಂಕವಿದ್ದು ಸಿರಾದಾಗ
ಸಂಪಗಯಿದಾವು ವನದಾಗ ||
ಸ್ಯಾವಂತಿಗಿದ್ದು ವನದಾಗೆ ತುಂಬಿತುಳುಕಿ
ಒಳ್ಳೆ ಮನವಿದ್ದು ಈರಣ್ಣ ಕೊಟ್ಟ ಸಂಪತ್ತು
ತುಂಬಿ ತುಳುಕಾವು ಮನಿಯಾಗೆ ||

ಸುಮಾರು ಎರಡು ಗಂಟೆ ಹಾಡಿದ ನಂತರ ಕೃಷ್ಣಶಾಸ್ತ್ರಿಗಳು ಈ ಹಾಡು ಇನ್ನೂ ಎಷ್ಟು ಇದೆ ಎಂದರು. ಸಿರಿಯಜ್ಜಿ ಬೆಳಗಿನವರೆಗೆ ಎಂದಳು. ಅವಳ ನೆನಪಿನ ಶಕ್ತಿಗೆ ಚಕಿತನಾದೆ. ಇವಳು ಹೀಗೆ